ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 15.02.2024.

**ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಎರಡು ಗಣಕೀಕೃತ ಆರ್‌ಟಿಸಿಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಎರಡು ದೃಢಿಕೃತ ದಾನಪತ್ರಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿ-4 ಎಂದು, ಎರಡು ಗಣಕೀಕೃತ ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6 ಎಂದು, ಎರಡು ಗಣಕೀಕೃತ ಆರ್‌ಟಿಸಿಗಳನ್ನು ಕ್ರಮವಾಗಿ ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**